ಸಂತ ಕವಿ ಕನಕದಾಸರ

# ನಳದಮಯಂತಿ

ಪ್ರೇಮ ಕಥೆ

ಡಾ.ಜಿ. ಕೃಷ್ಣಪ್ಪ



## ಆ ಲತಾಂಗಿಯ ಮೇಲೆ ಪರಮ ವಿಶಾಲ ಮನವಿಹುದು

ದೇವೇಂದ್ರನ ಮಾತನ್ನು ಕೇಳಿ ನಳ ಮಹಾರಾಜನ ಮನಸ್ಸು ಅಲ್ಲೋಲ ಕಲ್ಲೋಲವಾಯಿತು. ದಮಯಂತಿಯು ನನ್ನನ್ನೇ ಪತಿಯೆಂದು ಧ್ಯಾನಿಸುತ್ತಿದ್ದಾಳೆ. ನನಗೂ ಆ ಲತಾಂಗಿಯ ಮೇಲೆ ತುಂಬ ಮನಸ್ಸಾಗಿದೆ. ಹೀಗಿರುವಾಗ ಶಿವ ಶಿವ ಆ ಬಾಲಕಿಯನ್ನು ದೇವೇಂದ್ರನ ಹೆಂಡತಿಯಾಗು ಎಂದು ಯಾವ ನಾಲಗೆಯಿಂದ ಹೇಳಲಿ– ಎಂದು ಮನಸ್ಸಿನಲ್ಲಿಯೇ ಮರುಗಿದನು. ಪ್ರಕಟವಾಗಿ ವಿನಯದಿಂದ 'ದೇವೇಂದ್ರನೇ, ಆ ಮಂದಗಮನೆಯನ್ನು ತಮಗೆ ಒಲಿಯುವಂತೆ ಮಾಡು ಎಂದು ಹೇಳುತ್ತಿರುವಿರಿ. ಆಗದು ಎಂದರೆ ನಿಮಗೆ ಕೋಪ ಬಾರದೆ ಇಂದು. ಆದರೆ ಈ ಲೋಕದಲ್ಲಿ ಸ್ತ್ರೀಯರ ಗುಣ ಸ್ವಭಾವವನ್ನು ತಿಳಿಯುವುದು ಅಸಾಧ್ಯ.'

'ನಳ ಮಹಾರಾಜ ನೀನು ಜಾಣತನದಿಂದ ಕೆಲಸ ಸಾಧಿಸಬೇಕು'.

'ಸುರರಾಜನೇ, ಆ ಯುವತಿಯರು ನಮಗಿಂತ ಕಡು ಜಾಣೆಯರು. ಅವರು ಯಾವುದೇ ಕೆಲಸವನ್ನು ಪ್ರಯೋಜನವಿಲ್ಲದಂತೆ ಮಾಡಿ ಬಿಡುವರು. ಕಪಟ ವಿದ್ಯೆಯಿಂದ ಭ್ರಮೆಯನ್ನುಂಟು ಮಾಡುವರು. ನಿತ್ಯ ವ್ಯವಹಾರದಲ್ಲಿ ಸುಳ್ಳಾಡುವರು. ದೇಹ ಅಳಿದರೂ ಅಂತರಂಗದ ಭಾವವನ್ನು ವ್ಯಕ್ತಪಡಿಸುವುದಿಲ್ಲ. ವಿಶಾಲಾಕ್ಷಿಯರ ಹೃದಯವಿದು.'